# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 174 ಗ್ರಾಪಂಸಿ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:23-07-2019.

## ಸುತ್ತೋಲೆ

**ವಿಷಯ:** ರಾಜ್ಯದಲ್ಲಿನ ಗ್ರಾಮ ಪಂಚಾಯತಿ ಸಿಬ್ಬಂದಿಗಳ ನೇಮಕಾತಿಗೆ ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ:**

1. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 112 ಮತ್ತು 113.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 102 ವಿಇಎಲ್ 90, ದಿನಾಂಕ: 10-01-1994.
3. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 67 ಗ್ರಾಪಂಸಿ 2006, ದಿನಾಂಕ: 04-01-2008.
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 22 ಗ್ರಾಪಂಸಿ 2014, ದಿನಾಂಕ: 10-09-2014.
5. ಸರ್ಕಾರದ ತಿದ್ದೋಲೆ ಸಂಖ್ಯೆ: ಗ್ರಾಅಪ 22 ಗ್ರಾಪಂಸಿ 2014, ದಿನಾಂಕ: 20-09-2014.
6. ಸರ್ಕಾರದ ತಿದ್ದೋಲೆ ಸಂಖ್ಯೆ: ಗ್ರಾಅಪ 27 ಗ್ರಾಪಂಸಿ 2016, ದಿನಾಂಕ: 09-03-2016.
7. ಸರ್ಕಾರದ ಪತ್ರ ಸಂಖ್ಯೆ: ಗ್ರಾಅಪ 27 ಗ್ರಾಪಂಸಿ 2016, ದಿನಾಂಕ: 09-03-2016.
8. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 77 ಗ್ರಾಪಂಸಿ 2017, ದಿನಾಂಕ: 12-04-2017.
9. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 74 ಗ್ರಾಪಂಸಿ 2017 (ಭಾಗ-1), ದಿನಾಂಕ: 02-03-2018.
10. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 74 ಗ್ರಾಪಂಸಿ 2017 (ಭಾಗ-1), ದಿನಾಂಕ: 12-03-2018.
11. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 63 ಗ್ರಾಪಂಅ 2019 (ಭಾ-1), ದಿನಾಂಕ: 14-02-2019.

***

ಉಲ್ಲೇಖ (1) ರಿಂದ (8) ರವರೆಗಿನ ಸರ್ಕಾರದ ಆದೇಶಗಳು, ತಿದ್ದೋಲೆಗಳು, ಸುತ್ತೋಲೆ ಮತ್ತು ಪತ್ರಗಳಲ್ಲಿ ಗ್ರಾಮ ಪಂಚಾಯತಿಗಳ ಸಿಬ್ಬಂದಿ ವರ್ಗದ ಮಾದರಿ ಮತ್ತು ಸಿಬ್ಬಂದಿಗಳ ನೇಮಕಾತಿ ವಿಧಾನದ ಬಗ್ಗೆ ಹಾಗೂ ಗ್ರಾಮ ಪಂಚಾಯತಿಗಳು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪೂರ್ವಾನುಮೋದನೆ ಪಡೆಯದೆ ಈಗಾಗಲೇ ಕರ್ನಾಟಕ ಗ್ರಾಮ ಉಲ್ಲೇಖ (1) ರಿಂದ (8) ರವರೆಗಿನ ಸರ್ಕಾರದ ಆದೇಶಗಳು, ತಿದ್ದೋಲೆಗಳು, ಸುತ್ತೋಲೆ ಮತ್ತು ಪತ್ರಗಳಲ್ಲಿ ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದ ಮಾದರಿ ಮತ್ತು ಸಿಬ್ಬಂದಿಗಳ ನೇಮಕಾತಿ ವಿಧಾನದ ಬಗ್ಗೆ ಹಾಗೂ ಗ್ರಾಮ ಪಂಚಾಯತಿಗಳು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪೂರ್ವಾನುಮೋದನೆ ಪಡೆಯದೆ ಈಗಾಗಲೇ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 112 ಮತ್ತು 113 ರಂತೆ ನೇಮಕ ಮಾಡಿಕೊಂಡಿರುವ ಸಿಬ್ಬಂದಿಗಳಿಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದನೆ ನೀಡುವ ಬಗ್ಗೆ ಸವಿವರವಾಗಿ ತಿಳಿಸಲಾಗಿದೆ.

ದಿನಾಂಕ:10-09-2014 ರ ಸರ್ಕಾರದ ಆದೇಶದಲ್ಲಿ ಗ್ರಾಮ ಪಂಚಾಯತಿಯಿಂದ ನೇಮಕಗೊಂಡ ಸಿಬ್ಬಂದಿಗಳಿಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದನೆ ನೀಡಬೇಕಿದ್ದಲ್ಲಿ ಸಿಬ್ಬಂದಿ ವಾರ್ಷಿಕ ವೆಚ್ಚ ಶೇಕಡಾ 40 ರ ಮಿತಿಯೊಳಗಿರಬೇಕಿದೆ. ಕೆಲವೊಂದು ಗ್ರಾಮ ಪಂಚಾಯತಿಗಳ ಸಿಬ್ಬಂದಿಗಳಿಗೆ ಜಿಲ್ಲಾ ಪಂಚಾಯತಿಯಿಂದ ಅನುಮೋದನೆ ನೀಡಲು ಈಗಾಗಲೇ ದಿನಾಂಕ:02-03-2018 ರ ಸರ್ಕಾರದ ಆದೇಶದಂತೆ ಸರ್ಕಾರದ ನಿಧಿಯಿಂದ ವೇತನ ಪಡೆಯುತ್ತಿರುವ ಸಿಬ್ಬಂದಿಗಳ ವೆಚ್ಚವನ್ನು ಸಹ ಆ ಗ್ರಾಮ ಪಂಚಾಯತಿಯ ಸಿಬ್ಬಂದಿ ವಾರ್ಷಿಕ ವೆಚ್ಚಕ್ಕೆ ಪರಿಗಣಿಸುತ್ತಿದ್ದು, ಸಿಬ್ಬಂದಿ ವಾರ್ಷಿಕ ವೆಚ್ಚ ಶೇ 40 ನ್ನು ಮೀರುತ್ತಿದೆ, ಈ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತಿಯಿಂದ ನೇಮಕಗೊಂಡಿರುವ ಸಿಬ್ಬಂದಿಗಳಿಗೆ ಜಿಲ್ಲಾ ಪಂಚಾಯತಿಯಿಂದ ಅನುಮೋದನೆ ನೀಡಬೇಕಿದ್ದರೆ ಸರ್ಕಾರದ ನಿಧಿಯಿಂದ ವೇತನ ಪಡೆಯುತ್ತಿರುವ ಸಿಬ್ಬಂದಿಗಳ ವೇತನವನ್ನು ಸದರಿ ಗ್ರಾಮ ಪಂಚಾಯತಿಯ ಸಿಬ್ಬಂದಿ ವಾರ್ಷಿಕ ವೆಚ್ಚಕ್ಕೆ ಪರಿಗಣಿಸಬೇಕೇ ಅಥವಾ ಬೇಡವೇ ಎಂಬುದರ ಕುರಿತು ಸೂಕ್ತ ಮಾರ್ಗದರ್ಶನ / ಸ್ಪಷ್ಟೀಕರಣ ನೀಡಬೇಕೆಂದು ಕೆಲವು ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕೋರಿರುತ್ತಾರೆ.

ಉಲ್ಲೇಖ (10) ರ ದಿನಾಂಕ:12-03-2018 ರ ಸರ್ಕಾರದ ಸುತ್ತೋಲೆಯಲ್ಲಿ ಪ್ರಸ್ತುತ ರಾಜ್ಯದ ಗ್ರಾಮ ಪಂಚಾಯತಿಗಳ ಸಿಬ್ಬಂದಿ ವರ್ಗದ ಮಾದರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 1) ಬಿಲ್‌ಕಲೆಕ್ಟರ್, 2) ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್, 3) ವಾಟರ್‌ಮೆನ್/ಪಂಪ್ ಆಪರೇಟರ್/ಪಂಪ್ ಮೆಕಾನಿಕ್, 4) ಜವಾನ ಮತ್ತು 5) ಸ್ವಚ್ಛತಾಗಾರರ ವೃಂದದ ನೌಕರರುಗಳಿಗೆ ದಿನಾಂಕ: 01-03-2018 ರಿಂದ ಜಾರಿಗೆ ಬರುವಂತೆ ಮತ್ತು ದಿನಾಂಕ: 02-11-2017 ರ ಸರ್ಕಾರದ ಆದೇಶದಂತೆ ನೇಮಕಗೊಳ್ಳುವ ಡಾಟಾ ಎಂಟ್ರಿ ಆಪರೇಟರ್ ನೌಕರರಿಗೆ ಅವರು ನೇಮಕವಾದ ದಿನಾಂಕದಿಂದ ಸರ್ಕಾರದ ನಿಧಿಯಿಂದ ವೇತನ ಪಾವತಿಸಲು ಆದೇಶಿಸಲಾಗಿದೆ.

ದಿನಾಂಕ:10-09-2014 ರ ಸರ್ಕಾರದ ಆದೇಶ ಮತ್ತು ದಿನಾಂಕ:09-03-2016 ರ ಪತ್ರದಲ್ಲಿ ಗ್ರಾಮ ಪಂಚಾಯತಿ ವಾರ್ಷಿಕ ಆದಾಯ ಶಾಸನಬದ್ಧ ಅನುದಾನವನ್ನು ಒಳಗೊಂಡಂತೆ (ಕೇಂದ್ರ ಹಣಕಾಸು ಆಯೋಗ ಮತ್ತು ಇತರೆ ಅಭಿವೃದ್ಧಿ ಅನುದಾನ ಹೊರತುಪಡಿಸಿ) ಸಿಬ್ಬಂದಿ ವೆಚ್ಚ ಶೇ 40 ರಷ್ಟನ್ನು ಮೀರದಿರುವುದನ್ನು ದೃಢೀಕರಿಸಿಕೊಂಡು ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದಲ್ಲಿ ಮಂಜೂರಾಗಿರುವ 5 ವರ್ಗದ ಹುದ್ದೆಗಳಲ್ಲಿ ಗ್ರಾಮ ಪಂಚಾಯತಿಗಳು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪೂರ್ವಾನುಮೋದನೆ ಪಡೆಯದೆ ನೇಮಕಗೊಂಡು ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದನೆ ನೀಡಲು ತಿಳಿಸಲಾಗಿದೆ.

ಉಲ್ಲೇಖ (9)ರ ಸರ್ಕಾರದ ಸುತ್ತೋಲೆಯಲ್ಲಿ ದಿನಾಂಕ:12-03-2018 ರಿಂದ ಜಾರಿಗೆ ಬರುವಂತೆ ಗ್ರಾಮ ಪಂಚಾಯತಿಗಳು ಯಾವುದೇ ಹುದ್ದೆಗಳಿಗೆ ನೇಮಕಾತಿ ಮಾಡುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ. ಒಂದು ಪಕ್ಷ ಬಿಲ್‌ಕಲೆಕ್ಟರ್, ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ಮತ್ತು ಅಟೆಂಡರ್ ಹುದ್ದೆಗಳು ನಿವೃತ್ತಿ, ಮುಂಬಡ್ತಿ ಹಾಗೂ ಇನ್ನಿತರ ಕಾರಣಗಳಿಂದ ಖಾಲಿಯಾದಲ್ಲಿ ನೇಮಕಾತಿ ಮಾಡಿಕೊಳ್ಳಲು ಸಕಾರಣಗಳೊಡನೆ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪೂರ್ವಾನುಮೋದನೆ ಪಡೆದು ನೇಮಕಾತಿ ಮಾಡಿಕೊಳ್ಳಲು ಮತ್ತು ವಾಟರ್‌ಮೆನ್/ಪಂಪ್ ಆಪರೇಟರ್/ಪಂಪ್ ಮೆಕ್ಯಾನಿಕ್ ಮತ್ತು ಸ್ವಚ್ಛತಾಗಾರ ಹುದ್ದೆಗಳಲ್ಲಿ ಮಂಜೂರಾದ ಹುದ್ದೆಗಳಿಗಿಂತ ಹೆಚ್ಚಿನ ಸಂಖ್ಯೆಯ ನೌಕರರು ಇದ್ದಲ್ಲಿ ಗ್ರಾಮ ಪಂಚಾಯಿತಿಗಳು ಹೊಸದಾಗಿ ನೇಮಿಸದೆ ಖಾಲಿಯಾಗುವ ಹುದ್ದೆಗಳಿಗೆ ಗ್ರಾಮ ಪಂಚಾಯಿತಿಗಳಲ್ಲಿ ಹೆಚ್ಚುವರಿ ಇರುವ ನೌಕರರಿಂದ ಜೇಷ್ಠತೆ ಆಧರಿಸಿ ಹೊಂದಾಣಿಕೆ ಮಾಡುವುದು. ಈ ಪ್ರಕ್ರಿಯೆಯ ನಂತರವೂ ಮಂಜೂರಾದ ಹುದ್ದೆಗಳಲ್ಲಿಯೇ ಖಾಲಿ ಬಿದ್ದಲ್ಲಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪೂರ್ವಾನುಮೋದನೆ ಪಡೆದು ನೇಮಕಾತಿ ಮಾಡಿಕೊಳ್ಳುವಂತೆ ತಿಳಿಸಲಾಗಿದೆ.

ಉಲ್ಲೇಖ (10) ರ ಸರ್ಕಾರದ ಸುತ್ತೋಲೆಯಲ್ಲಿನ ನಿರ್ದೇಶನಗಳನ್ನು ಉಲ್ಲಂಘಿಸಿ ಗ್ರಾಮ ಪಂಚಾಯತಿಗಳು ನೌಕರರ ನೇಮಕಾತಿಗೆ ನಿರ್ಣಯ ತೆಗೆದುಕೊಂಡಿದ್ದರೂ ಇಂತಹ ನಿಯಮಬಾಹಿರ ಅಕ್ರಮ ನೇಮಕಾತಿಗಳನ್ನು ರದ್ದುಪಡಿಸುವಂತೆ ತಿಳಿಸಿದೆ. ಗ್ರಾಮ ಪಂಚಾಯತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿರುದ್ಧ ಕರ್ನಾಟಕ ಸಿವಿಲ್ ಸೇವಾ (ಸಿಸಿಎ) ನಿಯಮಗಳು, 1957 ರನ್ವಯ ಹಾಗೂ ಅಂತಹ ಕಾನೂನುಬಾಹಿರ ನಿರ್ಣಯಕ್ಕೆ ಭಾಗಿಯಾದ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರುಗಳ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ಮತ್ತು 48 (4) ಮತ್ತು 48(5) ರನ್ವಯ ಕ್ರಮ ಜರುಗಿಸಲು ಕ್ರಮ ವಹಿಸುವಂತೆ ಉಲ್ಲೇಖ (11) ರ ಸುತ್ತೋಲೆಯಲ್ಲಿ ತಿಳಿಸಿದೆ. ದಿನಾಂಕ:12-03-2018ರ ನಂತರ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪೂರ್ವಾನುಮೋದನೆ ಪಡೆಯದೆ ಗ್ರಾಮ ಪಂಚಾಯತಿಗಳು ನೇಮಕಾತಿ ಮಾಡಿಕೊಂಡಿರುವ ಪ್ರಕರಣಗಳಿಗೆ ಯಾವುದೇ ಕಾರಣಕ್ಕೂ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದನೆ ನೀಡದೆ ಅಕ್ರಮ ನೇಮಕಾತಿಗಳನ್ನು ರದ್ದುಪಡಿಸಿ ಸಂಬಂಧಿಸಿದವರ ವಿರುದ್ಧ ನಿಯಮಾನುಸಾರ ಕ್ರಮ ಜರುಗಿಸುವಂತೆ ಸಹ ತಿಳಿಸಿದೆ.

ಉಲ್ಲೇಖ (9) ಮತ್ತು (10) ರ ಸರ್ಕಾರದ ಆದೇಶ ಮತ್ತು ಸುತ್ತೋಲೆಯನ್ವಯ ಗ್ರಾಮ ಪಂಚಾಯತಿ ನೌಕರರಿಗೆ ಸರ್ಕಾರದ ನಿಧಿಯಿಂದ ವೇತನ ಪಾವತಿಸಲು ಕ್ರಮ ವಹಿಸುತ್ತಿರುವುದರಿಂದ **ದಿನಾಂಕ:31-10-2017 ರಲ್ಲಿದ್ದಂತೆ ಪ್ರಸ್ತುತ ರಾಜ್ಯದ ಗ್ರಾಮ ಪಂಚಾಯತಿಗಳ ಸಿಬ್ಬಂದಿ ವರ್ಗದ ಮಾದರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 1) ಬಿಲ್‌ಕಲೆಕ್ಟರ್, 2)ಕ್ಲರ್ಕ್, ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್, 3) ವಾಟರ್‌ಮೆನ್/ ಪಂಪ್ ಆಪರೇಟರ್ / ಪಂಪ್ ಮೆಕಾನಿಕ್ 4) ಜವಾನ ಮತ್ತು 5) ಸ್ವಚ್ಛತಾಗಾರ ವೃಂದದ ನೌಕರರಿಗೆ ಸರ್ಕಾರದ ನಿಧಿಯಿಂದ ವೇತನ ಪಾವತಿಸುತ್ತಿದ್ದು ಸಿಬ್ಬಂದಿ ವೆಚ್ಚ ಶೇ. 40 ಮೀರುತ್ತಿರುವುದರಿಂದ ಸಿಬ್ಬಂದಿ ವೆಚ್ಚ ಶೇ. 40 ಅನ್ನು ಪರಿಗಣಿಸದೆ, ಗ್ರಾಮ ಪಂಚಾಯತಿಗಳು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪೂರ್ವಾನುಮೋದನೆ ಪಡೆಯದೆ ಗ್ರಾಮ ಪಂಚಾಯತಿ ನಿರ್ಣಯದ ಮೂಲಕ ನೇಮಕಗೊಂಡು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಕೆಳಕಂಡಂತೆ ಖಚಿತಪಡಿಸಿಕೊಂಡು ಅನುಮೋದನೆ ನೀಡಲು ಬಾಕಿ ಇರುವ ಅರ್ಹ ಪ್ರಕರಣಗಳಿಗೆ ಜೇಷ್ಠತೆ ಆಧಾರದ ಮೇಲೆ ಗ್ರಾಮ ಪಂಚಾಯತಿ ನಿರ್ಣಯ ದಿನಾಂಕದಿಂದ (ಸೇವೆಗೆ ಸೇರಿದ ದಿನಾಂಕ) ಸೇವಾ ಜೇಷ್ಠತೆಗೆ ಮಾತ್ರ ಪರಿಗಣಿಸಲು ಹಾಗೂ ತತ್ಪರಿಣಾಮವಾಗಿ ಸದರಿ ನೌಕರರು ಯಾವುದೇ ಆರ್ಥಿಕ ಸೌಲಭ್ಯಗಳಿಗೆ ಅರ್ಹರಾಗುವುದಿಲ್ಲವೆಂದು ಷರತ್ತಿಗೊಳಪಟ್ಟು ಅನುಮೋದನೆ ನೀಡಲು** ಈ ಕೆಳಕಂಡಂತೆ ಕ್ರಮ ವಹಿಸಲು ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ.

1) ಸರ್ಕಾರವು ದಿನಾಂಕ:10-01-1994 ರ ಆದೇಶ, ದಿನಾಂಕ:04-01-2018 ರ ಸರ್ಕಾರದ ಅಧಿಕೃತ ಜ್ಞಾಪನ ಮತ್ತು ದಿನಾಂಕ:10-09-2014 ರ ಆದೇಶದಲ್ಲಿ ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದ ಮಾದರಿ ಮತ್ತು ನೇಮಕಾತಿ ವಿಧಾನದ ಬಗ್ಗೆ ವಿವರಿಸಲಾಗಿದ್ದು, ಆಗ ನಿಗದಿಪಡಿಸಿರುವ ಈ ಕೆಳಕಂಡ ವಿದ್ಯಾರ್ಹತೆ ಅನುಗುಣವಾಗಿ ಗ್ರಾಮ ಪಂಚಾಯತಿಯು ನೌಕರರನ್ನು ನಿರ್ಣಯದ ಮೂಲಕ ನೇಮಕಾತಿ ಮಾಡಿಕೊಂಡಿದ್ದಲ್ಲಿ ಮಾತ್ರ ಅನುಮೋದನೆ ನೀಡಬಹುದಾಗಿದೆ.

<u>ದಿನಾಂಕ:10-01-1994 ರ ಸರ್ಕಾರದ ಆದೇಶದಲ್ಲಿ ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆ</u>

| ಕ್ರ ಸಂ. | ಹುದ್ದೆಯ ಹೆಸರು | ನಿಗದಿಪಡಿಸಿದ ಕನಿಷ್ಠ ವಿದ್ಯಾರ್ಹತೆ |
|---|---|---|
| 1 | ಬಿಲ್ ಕಲೆಕ್ಟರ್/ಬಿಲ್ ಕಲೆಕ್ಟರ್ – ಕಂ ಕ್ಲರ್ಕ್ | ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. |
| 2 | ಕ್ಲರ್ಕ್ / ಅಕೌಂಟೆಂಟ್ ಕಂ ಬೆರಳಚ್ಚುಗಾರ | ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆ ಮತ್ತು ಕನ್ನಡ ಹಿರಿಯ ಶ್ರೇಣಿ ಬೆರಳಚ್ಚು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರಬೇಕು. |

| | | |
|---|---|---|
| 3 | ವಾಲ್ವ್‌ಮೆನ್ / ಪಂಪ್ ಆಪರೇಟರ್ ಕಂ ಮೆಕ್ಯಾನಿಕ್ | ಏಳನೇ ತರಗತಿ ತೇರ್ಗಡೆ ಹೊಂದಿರಬೇಕು. (ತಾಂತ್ರಿಕ ತರಬೇತಿ ಹೊಂದಿರುವವರಿಗೆ ಆದ್ಯತೆ) |
| 4 | ಜವಾನ / ಅಟೆಂಡರ್ | ಏಳನೇ ತರಗತಿ ತೇರ್ಗಡೆ ಹೊಂದಿರಬೇಕು. |

**ದಿನಾಂಕ:04-01-2008 ರ ಸರ್ಕಾರದ ಅಧಿಕೃತ ಜ್ಞಾಪನ ಮತ್ತು ದಿನಾಂಕ:09-03-2016 ರ ತಿದ್ದೋಲೆಯಲ್ಲಿ ನಿಗದಿಪಡಿಸಿರುವ ವಿದ್ಯಾರ್ಹತೆ**

| ಕ್ರ ಸಂ. | ಹುದ್ದೆಯ ಹೆಸರು | ನಿಗದಿಪಡಿಸಿದ ಕನಿಷ್ಠ ವಿದ್ಯಾರ್ಹತೆ |
|---|---|---|
| 1 | ಕ್ಲರ್ಕ್ | ಪಿ.ಯು.ಸಿ. ಮತ್ತು ಗಣಕಯಂತ್ರ ನಿಗಧಿತ ಕೋರ್ಸ್ ಹೊಂದಿದವರು. |
| 2 | ಕರವಸೂಲಿಗಾರ | ಪಿ.ಯು.ಸಿ. ಮತ್ತು ಗಣಕಯಂತ್ರ ನಿಗಧಿತ ಕೋರ್ಸ್ ಹೊಂದಿದವರು. |
| 3 | ವಾಟರ್‌ಮೆನ್ / ಪಂಪ್ ಆಪರೇಟರ್ ಕಂ ಮೆಕ್ಯಾನಿಕ್ ಕಂ ನೀರಿನ ಕರವಸೂಲಿಗಾರ | ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿರಬೇಕು. |
| 4 | ಜವಾನ | ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿರಬೇಕು. |
| 5 | ಸ್ವಚ್ಛತಾಗಾರರು | ಏಳನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. |

**ದಿನಾಂಕ:10-09-2014 ರ ಆದೇಶದಲ್ಲಿ ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆ**

| ಕ್ರ.ಸಂ. | ಸಿಬ್ಬಂದಿ ವರ್ಗ | ವಿದ್ಯಾರ್ಹತೆ |
|---|---|---|
| 1 | ಕರ ವಸೂಲಿಗಾರ | ಪಿ.ಯು.ಸಿ ಯಲ್ಲಿ ತೇರ್ಗಡೆ ಮತ್ತು ಗಣಕಯಂತ್ರದಲ್ಲಿ ಪರಿಣಿತಿ ಹೊಂದಿರಬೇಕು. |
| 2 | ಗುಮಾಸ್ತ/ಬೆರಳಚ್ಚುಗಾರ (ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ಮರು ಪದನಾಮಕರಣ ಮಾಡಲಾಗಿದೆ) | ಪಿ.ಯು.ಸಿ ಯಲ್ಲಿ ತೇರ್ಗಡೆ ಮತ್ತು ಕಂಪ್ಯೂಟರ್ ಅಪ್ಲಿಕೇಶನ್‌ಲ್ಲಿ ಪರಿಣಿತಿ ಹೊಂದಿದ್ದು ಕಂಪ್ಯೂಟರ್ ಅಪ್ಲಿಕೇಷನ್ ಕೋರ್ಸ್‌ನಲ್ಲಿ ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಮಾನ್ಯತೆ ಪಡೆದ ತರಬೇತಿ ಸಂಸ್ಥೆಯಿಂದ 6 ತಿಂಗಳ ತರಬೇತಿ ಪಡೆದಿರಬೇಕು ಹಾಗೂ ಪ್ರಮಾಣ ಪತ್ರ ಹೊಂದಿರಬೇಕು. |
| 3 | ವಾಟರ್‌ಮೆನ್/ಪಂಪ್ ಆಪರೇಟರ್ ಕಂ ಮೆಕಾನಿಕ್ ಕಂ ನೀರಿನ ಕರವಸೂಲಿಗಾರ. | ಎಸ್.ಎಸ್.ಎಲ್.ಸಿಯಲ್ಲಿ ಉತ್ತೀರ್ಣರಾಗಿರಬೇಕು. |
| 4 | ಜವಾನ | ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿರಬೇಕು. |
| 5 | ಸ್ವಚ್ಛತಾಗಾರ | 7ನೆ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. (ಈಗಾಗಲೇ ಸ್ವಚ್ಛತಾಗಾರರ ಹುದ್ದೆಯಲ್ಲಿ ನೇಮಕಗೊಂಡಿದ್ದು, 7ನೇ ತರಗತಿಯಲ್ಲಿ ಉತ್ತೀರ್ಣರಾಗದಿದ್ದರೆ ಈ ಆದೇಶ ಹೊರಡಿಸಿದ ದಿನಾಂಕದಿಂದ 2 ವರ್ಷದೊಳಗೆ ರಾಜ್ಯ ಶಿಕ್ಷಣ ಇಲಾಖೆ ನಿಗದಿಗೊಳಿಸಿರುವ 7ನೇ ತರಗತಿ ಅಥವಾ ಕೇಂದ್ರ ಶಿಕ್ಷಣ ಇಲಾಖೆ ನಿಗದಿಗೊಳಿಸಿರುವ 8ನೇ ತರಗತಿಯನ್ನು ಉತ್ತೀರ್ಣರಾಗಬೇಕು.) |

ವಾಟರ್‌ಮೆನ್ / ಪಂಪ್ ಮೆಕಾನಿಕ್ / ಅಟೆಂಡರ್ ಹುದ್ದೆಯಲ್ಲಿ ಸತತವಾಗಿ 5 ವರ್ಷಗಳ ಸೇವೆ ಸಲ್ಲಿಸಿ ಎಸ್.ಎಸ್.ಎಲ್.ಸಿ. ಉತ್ತೀರ್ಣರಾಗಿರುವ ನೌಕರರನ್ನು ಗ್ರಾಮ ಪಂಚಾಯತಿಯಲ್ಲಿ ಖಾಲಿ ಇರುವ ಬಿಲ್‌ಕಲೆಕ್ಟರ್ ಅಥವಾ ಕ್ಲರ್ಕ್ ಹುದ್ದೆಗೆ ಮುಂಬಡ್ತಿ ನೀಡಿದ್ದಲ್ಲಿ ಅನುಮೋದನೆ ನೀಡುವುದು.

2) ಗ್ರಾಮ ಪಂಚಾಯತಿಗಳು ಗ್ರಾಮ ಪಂಚಾಯತಿ ಸಾಮಾನ್ಯ ಸಭೆ / ವಿಶೇಷ ಸಭೆಗಳಲ್ಲಿ ನೌಕರರ ನೇಮಕಾತಿಗೆ ಸಂಬಂಧಿಸಿದಂತೆ ನಿರ್ಣಯ (ತೀರ್ಮಾನ) ತೆಗೆದುಕೊಂಡಿರುವ ಮೂಲ ಪ್ರತಿ ಕಡ್ಡಾಯವಾಗಿ ಇರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

3) ನೌಕರರ ಹಾಜರಾತಿ / ಬಯೋಮೆಟ್ರಿಕ್ ಹಾಜರಾತಿ ಇರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

4) ನೌಕರರಿಗೆ ವೇತನ ಪಾವತಿಸಿರುವ ವೇತನ ಬಟವಾಡೆ ರಿಜಿಸ್ಟರ್ ಇರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

5) ಮಂಜೂರಾದ ಬಿಲ್‌ಕಲೆಕ್ಟರ್ ಒಂದು ಹುದ್ದೆಯ ಜೊತೆಗೆ ದಿನಾಂಕ:10-01-1994 ರ ಆದೇಶದಲ್ಲಿ ಯಾವುದೇ ಗ್ರಾಮ ಪಂಚಾಯತಿಯ ವಾರ್ಷಿಕ ಆದಾಯ ರೂ.30,000 ಕ್ಕಿಂತ ಕಡಿಮೆ ಇಲ್ಲದಿದ್ದರೆ ಅಂತಹ ಗ್ರಾಮ ಪಂಚಾಯತಿಗಳು ಹೆಚ್ಚುವರಿಯಾಗಿ ಒಂದು ಬಿಲ್‌ಕಲೆಕ್ಟರ್ ಹುದ್ದೆಗೆ ನೇಮಿಸಿಕೊಂಡು ಹಾಲಿ ಕರ್ತವ್ಯ ನಿರ್ವಹಿಸುತ್ತಿದ್ದರೆ ಅನುಮೋದನೆ ನೀಡತಕ್ಕದ್ದು.

6) ದಿನಾಂಕ:10-09-2014 ರ ಸರ್ಕಾರದ ಆದೇಶದಂತೆ ಗ್ರಾಮ ಪಂಚಾಯತಿಯಲ್ಲಿ ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ಹುದ್ದೆ ಖಾಲಿ ಇದ್ದು, ಸದರಿ ಹುದ್ದೆಗೆ ಸರ್ಕಾರದ ಆದೇಶದ ಅನುಸಾರ ಡಾಟಾ ಎಂಟ್ರಿ ಆಪರೇಟರ್ ವೃಂದದ ನೌಕರರನ್ನು ನೇಮಿಸಿಕೊಂಡು ಹಾಲಿ ಕರ್ತವ್ಯ ನಿರ್ವಹಿಸುತ್ತಿದ್ದರೆ ಅನುಮೋದನೆ ನೀಡತಕ್ಕದ್ದು.

7) ಮಂಜೂರಾದ ವಾಟರ್‌ಮೆನ್ / ಪಂಪ್ ಆಪರೇಟರ್ ಒಂದು ಹುದ್ದೆಯ ಜೊತೆಗೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳು ಪ್ರತ್ಯೇಕವಾದ ನಳನೀರಿನ ಸ್ಥಾವರಗಳನ್ನು ಹೊಂದಿ (ಓವರ್‌ಹೆಡ್ ಟ್ಯಾಂಕ್) ಅದರ ಅಗತ್ಯಕ್ಕೆ ತಕ್ಕಂತೆ ಪ್ರತಿ ನೀರು ಸರಬರಾಜು ಸ್ಥಾವರಕ್ಕೆ ಒಬ್ಬ ವಾಟರ್‌ಮೆನ್ / ಪಂಪ್ ಆಪರೇಟರ್/ಪಂಪ್ ಮೆಕಾನಿಕ್ ಮತ್ತು 3 ಸಿಸ್ಟ್ರಿನ್ ಕಿರು ನೀರು ಸರಬರಾಜು ಸ್ಥಾವರಗಳಿಗೆ ಒಬ್ಬ ವಾಟರ್‌ಮೆನ್ / ಪಂಪ್ ಆಪರೇಟರ್ ಹಾಲಿ ಕರ್ತವ್ಯ ನಿರ್ವಹಿಸುತ್ತಿದ್ದರೆ ಅನುಮೋದನೆ ನೀಡತಕ್ಕದ್ದು.

8) ಮಂಜೂರಾದ ಸ್ವಚ್ಛತಾಗಾರರ ಒಂದು ಹುದ್ದೆಯ ಜೊತೆಗೆ 5000 ಜನಸಂಖ್ಯೆಗೆ ಒಂದು, 9000 ಜನಸಂಖ್ಯೆಗೆ ಇಬ್ಬರು ಮತ್ತು 13000 ಜನಸಂಖ್ಯೆಗೆ ಮೂರು ಸ್ವಚ್ಛತಾಗಾರ ಹುದ್ದೆಗಳಿಗೆ ನೇಮಿಸಿಕೊಂಡು ಹಾಲಿ ಕರ್ತವ್ಯ ನಿರ್ವಹಿಸುತ್ತಿದ್ದರೆ ಅನುಮೋದನೆ ನೀಡತಕ್ಕದ್ದು.

9) **ಮೇಲ್ಕಂಡಂತೆ ಗ್ರಾಮ ಪಂಚಾಯತಿ ಸಿಬ್ಬಂದಿ ವರ್ಗದ ಮಾದರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಸರ್ಕಾರದ ನಿಧಿಯಿಂದ ವೇತನ ಪಾವತಿಸುತ್ತಿರುವುದರಿಂದ ಅನುಮೋದನೆ ನೀಡಲು ಸಿಬ್ಬಂದಿ ವೆಚ್ಚ ಶೇ. 40 ಅನ್ನು ಪರಿಗಣಿಸಬಾರದು.**

10) **ದಿನಾಂಕ:12-03-2018ರ ನಂತರ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪೂರ್ವಾನುಮೋದನೆ ಪಡೆಯದೆ ಗ್ರಾಮ ಪಂಚಾಯತಿಗಳು ನೇಮಕಾತಿ ಮಾಡಿಕೊಂಡಿರುವ ಪ್ರಕರಣಗಳಿಗೆ ಯಾವುದೇ ಕಾರಣಕ್ಕೂ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅನುಮೋದನೆ ನೀಡಬಾರದು ಮತ್ತು ದಿನಾಂಕ:12-03-2018 ರ ನಂತರದ ಪ್ರಸ್ತಾವನೆಗಳನ್ನು ಅನುಮೋದನೆ ನೀಡಲು ಪರಿಗಣಿಸಬಾರದು.**

11) ಅನುಮೋದನೆ ನೀಡಲು ಬಾಕಿ ಇರುವ ಅರ್ಹ ಪ್ರಕರಣಗಳನ್ನು ಜೇಷ್ಠತೆ ಆಧಾರದ ಮೇಲೆ ಪಟ್ಟಿ ಮಾಡಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ದಿನಾಂಕ:31-07-2019 ರೊಳಗಾಗಿ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು. ಈ ರೀತಿ ಸ್ವೀಕರಿಸಿದ ಪ್ರಸ್ತಾವನೆಯನ್ನು ಸಂಬಂಧಿಸಿದ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಪರಿಶೀಲಿಸಿ ದಿನಾಂಕ: 15-08-2019 ರೊಳಗೆ ಸಂಬಂಧಿಸಿದ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

12) ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳಿಂದ ಸ್ವೀಕೃತವಾದ ಪ್ರಸ್ತಾವನೆಗಳನ್ನು ಜಿಲ್ಲಾ ಪಂಚಾಯತಿಯ ಉಪಕಾರ್ಯದರ್ಶಿಯವರು ಪರಿಶೀಲಿಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಅನುಮೋದನೆಗೆ ಸಲ್ಲಿಸತಕ್ಕದ್ದು. ಈ ರೀತಿ ಸ್ವೀಕರಿಸಿದ ಪ್ರಸ್ತಾವನೆಗಳಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ದಿನಾಂಕ:15-09-2019 ರೊಳಗೆ ಕಡ್ಡಾಯವಾಗಿ ಅನುಮೋದನೆ ನೀಡತಕ್ಕದ್ದು.

13) ಮೇಲ್ಕಂಡಂತೆ ಯಾವುದೇ ಹಂತದಲ್ಲಿ ಲೋಪವಾದಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ ವಿರುದ್ಧ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಶಿಸ್ತು ಕ್ರಮ ಜರುಗಿಸಲು ಮತ್ತು ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.

ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಉಪಕಾರ್ಯದರ್ಶಿಗಳು, ಎಲ್ಲಾ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಗ್ರಾಮ ಪಂಚಾಯತಿಗಳ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಸೂಚಿಸಿದೆ.

Narayana D.G.
(ಡಿ.ಜಿ. ನಾರಾಯಣ) 23/7/19
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ, (ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಗೆ:**

1) ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್‌ಗಳು,
2) ಎಲ್ಲಾ ಉಪಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್‌ಗಳು.
3) ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್‌ಗಳು.
4) ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು.

**ಪ್ರತಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿರವರು
2. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ರವರ ಆಪ್ತ ಕಾರ್ಯದರ್ಶಿರವರು.
3. ಸಂಪಾದಕರು, ಕರ್ನಾಟಕ ವಿಕಾಸ ಪತ್ರಿಕೆ/ವೆಬ್‌ಸೈಟ್, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ.
4. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.